## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30-07-2015ರ ನಡವಳಿಗಳು

### ವಿಷಯದ ಸಂಖ್ಯೆ : 150 / 2015-16

ವಿಷಯ: **Removal of accumulated earth in SWD in RR Nagar Zone Est. Cost 416.00 Lakhs**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ಕಾಮಗಾರಿಗೆ ರೂ.416.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ. ಅದರಂತೆ, ಮುಖ್ಯ ಅಭಿಯಂತರರು (ಬೃ.ಮ.ನೀ.ಗಾ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ:18-05-2015 ರಂದು ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ಅನ್ನು ತಾಂತ್ರಿಕ ಮತ್ತು ಆರ್ಥಿಕ ಬಿಡ್ (Double Cover) ಟೆಂಡರ್ ಆಹ್ವಾನಿಸಲಾಗಿತ್ತು.

ಈ ಕಾಮಗಾರಿಗೆ 3ನೇ ಬಾರಿ E-Procurment ಮೂಲಕ ದಿನಾಂಕ:22-06-2015 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:06-07-2015 ಆಗಿದ್ದು, ತಾಂತ್ರಿಕವಾಗಿ ದಿನಾಂಕ:08-07-2015 ರಂದು ನಿಗಧಿಪಡಿಸಲಾಗಿದ್ದು, ಅದರಂತೆ, ದಿನಾಂಕ:08-07-2015 ರಂದು ತಾಂತ್ರಿಕ ಬಿಡ್ ತೆರಯಲಾಗಿದ್ದು, ಟೆಂಡರ್‌ನಲ್ಲಿ ಒಬ್ಬರೇ ಗುತ್ತಿಗೆದಾರರಾದ ಶ್ರೀ. ಉದಯಶಿವಕುಮಾರ್ (ಉದಯಶಿವಕುಮಾರ್ ರಾಜಣ್ಣ) ರವರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ರವರು ಸಲ್ಲಿಸಿದ್ದ ತಾಂತ್ರಿಕ ಬಿಡ್ ಅನ್ನು ಪರಿಶೀಲಿಸಲಾಗಿ, ಗುತ್ತಿಗೆದಾರರು ಕಾಮಗಾರಿಗೆ ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿರುತ್ತಾರೆ. ತಾಂತ್ರಿಕ ಬಿಡ್‌ಗೆ ಮುಖ್ಯ ಅಭಿಯಂತರರು ದಿನಾಂಕ:15-07-2015 ರಂದು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ರವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ಗುತ್ತಿಗೆದಾರರು ನಮೂದಿಸಿರುವ ದರಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2014-15ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2014-15ನೇ ಸಾಲಿನ ದರಪಟ್ಟಿಯ ದರಗಳಂತೆ) |
|---|---|---|---|---|---|
| 1 | ಶ್ರೀ. ಉದಯ್‌ಶಿವಕುಮಾರ್ ರಾಜಣ್ಣ | 416.64 | ರೂ.4,04,57,477.00 | 4,58,68,062.20 | 13.37% ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ, ಈ ಕಾಮಗಾರಿಗೆ ಗುತ್ತಿಗೆದಾರರಾದ ಶ್ರೀ. ಉದಯ್‌ಶಿವ ಕುಮಾರ್ ರಾಜಣ್ಣ ರವರು ರೂ.4,58,68,062.20 ಗಳನ್ನು ನಮೂದಿಸಿದ್ದು, ಈ ಮೊತ್ತವು ಅನುಮೋದಿತ ಅಂದಾಜು ಪಟ್ಟಿಯ 2014-15ನೇ ಸಾಲಿನ ದರಪಟ್ಟಿಗೆ ಹೋಲಿಸಿದಲ್ಲಿ ಶೇ. 13.37% ರಷ್ಟು ಹೆಚ್ಚಿಗೆ ಇರುತ್ತದೆ.

..........................2

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಪ್ರಸ್ತಾಪಿಸಿರುವ ಕಾಮಗಾರಿಗೆ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.4,58,68,062.20 ಗಳಾಗಿದ್ದು, ಈ ಮೊತ್ತವು ಅನುಮೋದಿತ ಅಂದಾಜು ಪಟ್ಟಿಯ 2014-15ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.13.37% ರಷ್ಟು ಹೆಚ್ಚಿಗೆ ಇದ್ದು, ಕೆಳಕಂಡ ಅಂಶಕ್ಕೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 28-07-2015ರ ಟಿಪ್ಪಣಿ.

1. ಗುತ್ತಿಗೆದಾರರಾದ ಶ್ರೀ. ಉದಯ್‌ಶಿವ ಕುಮಾರ್ ರಾಜಣ್ಣ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.4,58,68,062.20 ಗಳನ್ನು ಅನುಮೋದಿತ ಅಂದಾಜು ಪಟ್ಟಿಯ 2014-15ನೇ ಸಾಲಿನ ದರಪಟ್ಟಿಗೆ ಹೋಲಿಸಿದಗ ಬಂದಂತಹ ಶೇ.13.37% ರಷ್ಟು ಹೆಚ್ಚಿನ ಟೆಂಡರ್‌ಗೆ ಅನುಮೋದನೆ.

**ತೀರ್ಮಾನ: "ಅನುಮೋದಿಸಿದೆ".**

**(ಟಿ.ಎಂ.ವಿಜಯಭಾಸ್ಕರ್)**
ಆಡಳಿತಗಾರರು